

ಪ್ರಾರ್ಥನೆ

ಸೂಕ್ತಿಪ್ರಭ



# ಪ್ರಾರ್ಥನೆ

ಚಿತಾಭಸ್ಮಾಲೇಪೋ ಗರಲಮಶನಂ ದಿಕ್ಪಟಧರೋ
ಜಟಾಧಾರೀ ಕಂಠೇ ಭುಜಗಪತಿಹಾರೀ ಪಶುಪತಿಃ ।
ಕಪಾಲೀ ಭೂತೇಶೋ ಭಜತಿ ಜಗದೀಶೈಕಪದವೀಂ
ಭವಾನಿ ತ್ವತ್ ಪಾಣಿಗ್ರಹಣ ಪರಿಪಾಟೀಫಲಮಿದಮ್॥

ವಿಷವನ್ನು ಕುಡಿದು, ಚಿತೆಯ ಭಸ್ಮವನ್ನು ಮೈಗೆಲ್ಲ ಬಳಿದುಕೊಂಡು, ದಿಕ್ಕುಗಳನ್ನೇ ಬಟ್ಟೆಯಾಗಿ ಉಟ್ಟು, ಜಟೆಯನ್ನು ಧರಿಸಿ, ಕಂಠದಲ್ಲಿ ಹಾವನ್ನು ಹಾರವಾಗಿ ಹಾಕಿಕೊಂಡು, ತಲೆಯೋಡನ್ನು ಭಿಕ್ಷಾಪಾತ್ರೆಯಾಗಿ ಕೈಯಲ್ಲಿ ಹಿಡಿದು, ಭೂತಗಳ ಮಧ್ಯೆ ವಾಸಿಸುವ ಪಶುಪತಿಯಾದ ಶಿವನು ಅದ್ವಿತೀಯವಾದ ಜಗದೀಶ್ವರನ ಪದವಿಯನ್ನು ಹೊಂದಿದನು—ಭವಾನಿ ಇದೂ ನಿನ್ನ ಪಾಣಿಗ್ರಹಣದ ಫಲವೇ!

ನ ಮೋಕ್ಷಸ್ಯಾಕಾಂಕ್ಷಾ ನ ಚ ವಿಭವವಾಂಛಾಽಪಿ ಚ ನ ಮೇ
ನ ವಿಜ್ಞಾನಾಪೇಕ್ಷಾ ಶಶಿಮುಖಿ ಸುಖೇಚ್ಛಾಽಪಿ ನ ಪುನಃ ।
ಅತಸ್ತ್ವಾಂ ಸಂಯಾಚೇ ಜನನಿ ಜನನಂ ಯಾತು ಮಮ ವೈ
ಮೃಡಾನೀ ರುದ್ರಾಣೀ ಶಿವ ಶಿವ ಭವಾನೀತಿ ಜಪತಃ ॥

ಹೇ ಚಂದ್ರಮುಖಿ, ನನಗೆ ಮೋಕ್ಷದ ಆಸೆಯಿಲ್ಲ; ಧನಸಂಪತ್ತುಗಳ ಇಚ್ಛೆಯಿಲ್ಲ; ಜ್ಞಾನದ ಅಪೇಕ್ಷೆ ಇಲ್ಲ; ಸುಖದ ಇಚ್ಛೆಯೂ ಇಲ್ಲ; ಹೇ ತಾಯಿ, ನಿನ್ನ ಮುಂದೆ ಇಷ್ಟು ಮಾತ್ರ ಯಾಚಿಸುತ್ತೇನೆ—ಮೃಡಾನಿ, ರುದ್ರಾಣಿ, ಶಿವ, ಶಿವ, ಭವಾನಿ ಎಂದು ಜಪಿಸುತ್ತ ನನ್ನ ಜನ್ಮವೆಲ್ಲವೂ ಕಳೆದುಹೋಗಲಿ.

ನಾರಾಧಿತಾಽಸಿ ವಿಧಿನಾ ವಿವಿಧೋಪಚಾರೈಃ
ಕಿಂ ರುಕ್ಷಚಿಂತನಪರೈರ್ನ ಕೃತಂ ವಚೋಭಿಃ ।
ಶ್ಯಾಮೇ ತ್ವಮೇವ ಯದಿ ಕಿಂಚನ ಮಯ್ಯನಾಥೇ
ಧತ್ಸೇ ಕೃಪಾಮುಚಿತಮಂಬ ಪರಂ ತವೈವ ॥

ವಿಧಿಪೂರ್ವಕವಾದ ವಿವಿಧೋಪಚಾರಗಳಿಂದ ನಾನು ಎಂದೂ ನಿನ್ನನ್ನು ಪೂಜಿಸಿಲ್ಲ; ಶುಷ್ಕಚಿಂತಾಪರವಾದ ಹರಟೆಗಳಿಂದ ಕಾಲವನ್ನು ಕಳೆದು ನಾನು ಯಾವ ತಪ್ಪನ್ನು ತಾನೇ ಮಾಡಿಲ್ಲ! ಆದರೂ ಹೇ ಶ್ಯಾಮೇ, ಅನಾಥನಾದ ನನ್ನಲ್ಲಿ ಸ್ವಲ್ಪ ಕೃಪೆಯನ್ನು ತೋರುವೆಯಾದರೆ ಅದು ನಿನಗೆ ಉಚಿತವೇ ಆಗಿರುವುದು.

## ಶ್ರೀಮಾತೆಯ ನುಡಿ

- ಶ್ರೀರಾಮಕೃಷ್ಣರು ಮಾಡಿದ್ದೆಲ್ಲಾ ದೇವರಿಗಾಗಿ. ಒಂದು ಸಲ ನನಗೆ ಷೋಡಶೀಪೂಜೆ ಮಾಡಿದರು. ಆಗ 'ನನಗ ಕೊಟ್ಟ ಬಳೆ ಬಟ್ಟೆ ಪೂಜಾದ್ರವ್ಯ ಇವನ್ನು ಏನು ಮಾಡಲಿ?' ಎಂದೆ. ಸ್ವಲ್ಪ ಆಲೋಚನೆ ಮಾಡಿ, 'ಅವನ್ನೆಲ್ಲಾ ನಿಮ್ಮ ತಾಯಿಗೆ ಕೊಡಬಹುದು' ಎಂದರು. ಆಗ ನಮ್ಮ ತಾಯಿ ಬದುಕಿದ್ದರು. 'ನೀವು ತಾಯಿಗೆ ಕೊಡುವಾಗ ಆಕೆಯನ್ನು ಸಾಧಾರಣ ಸ್ತ್ರೀಯಂತೆ ನೋಡಬೇಡಿ. ಆಕೆ ಜಗನ್ಮಾತೆಯ ಆವಿರ್ಭಾವವೇ ಎಂದು ನೋಡಿ' ಎಂದರು. ನಾನು ಹಾಗೆಯೇ ಮಾಡಿದೆ. ಅವರ ಬೋಧನೆಯ ಬಗೆ ಇದು.
- ಶ್ರೀಗುರುದೇವರ ಒಂದು ಭಾವಚಿತ್ರವನ್ನು ಇಟ್ಟುಕೊ. ಅವರು ಯಾವಾಗಲೂ ನಿನ್ನಲ್ಲಿರುವರು ಎಂದು ಭಾವಿಸು. ನಿನ್ನ ದುಃಖವನ್ನು ಅವರ ಎದುರಿಗೆ ಹೇಳಿಕೊ. ಅವರಲ್ಲಿ ಭಕ್ತಿ ಇಡು. ಕ್ರಮೇಣ ಶಾಂತಿ ದೊರಕುವುದು.
- ಮಗು, ಈ ಮನಸ್ಸು ಒಂದು ಕಾಡಾನೆಯಂತೆ, ಗಾಳಿಯಂತೆ ಚಲಿಸುತ್ತಿರುವುದು. ಅದಕ್ಕೇ ಯಾವಾಗಲೂ ನಿತ್ಯಾನಿತ್ಯ ವಸ್ತುವಿವೇಕ ಮಾಡಬೇಕು. ದೇವರನ್ನು ಕಾಣಬೇಕಾದರೆ ಕಷ್ಟಪಟ್ಟು ಸಾಧನೆ ಮಾಡಬೇಕು.
- ಎಲ್ಲವೂ ಆಸೆಯಿಂದಲೇ ಆದುದು. ಆಸೆಯಿಲ್ಲದಿದ್ದರೆ ಮನುಷ್ಯನಿಗೆ ಯಾವ ಬಂಧನವಿದೆ? ನೀನು ನೋಡುತ್ತಿರುವಂತೆ ನಾನು ಇವೆಲ್ಲದರ ಮಧ್ಯೆ ಇರುವೆ. ಆದರೆ ಇದಾವುದರ ಮೇಲೂ ನನಗೆ ಸ್ವಲ್ಪವೂ ಮನಸ್ಸು ಇಲ್ಲ.
- ಪ್ರಾರಬ್ಧಕರ್ಮವನ್ನು ಅನುಭವಿಸಿಯೇ ತೀರಬೇಕು. ಯಾರಿಗೂ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಭಗವನ್ನಾಮೋಚ್ಚಾರಣೆಯಿಂದ ಅದರ ತೀವ್ರತೆಯನ್ನು ಕಡಿಮೆ ಮಾಡಬಹುದು. ನಿನಗೆ ನೇಗಿಲಿನಷ್ಟು ದೊಡ್ಡ ಗಾಯವಾಗಬೇಕಾದ ಕಡೆ ಒಂದು ಸೂಜಿ ಮೊನೆಯಷ್ಟು ನೋವಾಗಬಹುದು. *